ಕರ್ನಾಟಕ ಸರ್ಕಾರ
# ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯಾದಗಿರಿ
ಕೋಣೆ ಸಂಖ್ಯೆ : ಸಿ-17, ಒಂದನೇ ಮಹಡಿ, ಜಿಲ್ಲಾ ಆಡಳಿತ ಭವನ ಸಂಕೀರ್ಣ, ಚಿತ್ತಾಪೂರ ರಸ್ತೆ, ಯಾದಗಿರಿ-585202
Email_ID : ddwcdyad@gmail.com ಫೋನ್ : 08473-253739

**ಸಂಖ್ಯೆ:**ಉನಿಯಾ/ಮಮಅಇ/ಐಸಿಡಿಎಸ್/ಶಾಪೂಶಿಬ/2026-27 **ದಿನಾಂಕ:**18.09.2026

## ಪ್ರಕಟಣೆ

**ವಿಷಯ:** ಶಾಲಾ ಪೂರ್ವ ಶಿಕ್ಷಣ ಬಲವರ್ಧನೆಯಡಿ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನು ಗೌರವಧನ ಆಧಾರದ ಮೇರೆಗೆ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸುತ್ತಿರುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ಪ್ರಕಟಿಸುವುದೇನೆಂದರೆ, ಯಾದಗಿರಿ ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳ ಶಾಲಾ ಪೂರ್ವ ಶಿಕ್ಷಣ ಬಲವರ್ಧನೆಯಡಿ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನು ತಾತ್ಕಾಲಿಕವಾಗಿ ಅನುಬಂಧ-1 ರಲ್ಲಿ ತಿಳಿಸಲಾದ 02-ಹುದ್ದೆಗಳನ್ನು ಜಾರಿಯಲ್ಲಿರುವರೆಗೆ ಮಾತ್ರ ಗೌರವಧನ ಆಧಾರದಲ್ಲಿ ಅನುಬಂಧ-2ರಲ್ಲಿ ತಿಳಿಸಿರುವಂತೆ ವಿದ್ಯಾರ್ಹತೆ, ಹೆಚ್ಚುವರಿ ಅರ್ಹತೆಗಳು, ಅನುಭವ ಹಾಗೂ ಉಸ್ತುವಾರಿಯಲ್ಲಿ ಉತ್ತಮ ಕೆಲಸ ನಿರ್ವಹಿಸಬಲ್ಲ, ತರಬೇತಿಗಳನ್ನು ಹಮ್ಮಿಕೊಳ್ಳಲು ಸಾಮರ್ಥ್ಯ, ಕೌಶಲ್ಯ ಹೊಂದಿರುವ, ಗಣಕಯಂತ್ರ ನಿರ್ವಹಣೆಯಲ್ಲಿ ಪರಿಣಿತಿ, ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪೂರ್ಣ ಹಿಡಿತವುಳ್ಳ ಅಭ್ಯರ್ಥಿಗಳನ್ನು ನೇರವಾಗಿ ಸಂದರ್ಶನಕ್ಕೆ ಆಹ್ವಾನಿಸಿ ಸಂದರ್ಶನ/ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳು/ಅನುಭವ/ಕಂಪ್ಯೂಟರ್ ಪರೀಕ್ಷೆಗಳ ಮೂಲಕ ನೇಮಕಾತಿಗೊಳಿಸಲು ಅರ್ಜಿ ಆಹ್ವಾನಿಸಲಾಗಿದೆ.

**ಅನುಬಂಧ-1**

ಶಾಲಾ ಪೂರ್ವ ಶಿಕ್ಷಣ ಬಲವರ್ಧನೆಯಡಿ ಯಾದಗಿರಿ ಜಿಲ್ಲೆಯಲ್ಲಿ ಗೌರವ ಸೇವೆ ಆಧಾರದ ಮೇರೆಗೆ ಭರ್ತಿ ಮಾಡಿಕೊಳ್ಳಲಾಗುವ ಸಿಬ್ಬಂದಿಗಳು ವಿವರ:

| ಕ್ರಸಂ | ಕಛೇರಿಯ ಹೆಸರು | ಹುದ್ದೆ | ಹುದ್ದೆಗಳು | ನಿಗದಿಪಡಿಸಿದ ಗೌರವಧನ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಉಪ ನಿರ್ದೇಶಕರ ಕಛೇರಿ, ಯಾದಗಿರಿ | ಜಿಲ್ಲಾ ಸಂಪನ್ಮೂಲ ವ್ಯಕ್ತಿ | 2 | ರೂ.35,000/- | |

**ಅನುಬಂಧ-2**

**ಶಾಲಾ ಪೂರ್ವ ಶಿಕ್ಷಣ ಬಲವರ್ಧನೆಯಡಿ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳ ಹುದ್ದೆ/ಗೌರವಧನ/ಅರ್ಹತೆ/ಜವಾಬ್ದಾರಿಗಳ ವಿವರ:**

| | |
|---|---|
| **ಹುದ್ದೆ** | ಜಿಲ್ಲಾ ಸಂಪನ್ಮೂಲ ವ್ಯಕ್ತಿ |
| **ಗೌರವ ಧನ** | ರೂ.35,000/- (ಮೂವತ್ತೈದು ಸಾವಿರ ರೂಪಾಯಿಗಳು ಮಾತ್ರ |
| **ಅರ್ಹತೆಗಳು** | • ಅಭ್ಯರ್ಥಿಯು ಎಂ.ಎ ಸಮಾಜ ಶಾಸ್ತ್ರ ಅಥವಾ ಎಮ್.ಎಸ್.ಡಬ್ಲ್ಯೂ ಉತ್ತೀರ್ಣ<br>• ಅಭ್ಯರ್ಥಿಗಳು ಶಾಲಾಪೂರ್ವ ಶಿಕ್ಷಣದಲ್ಲಿ ಅಥವಾ ಮಕ್ಕಳ ಕಲಿಕಾ ವಿಷಯ, ಅಥವಾ ಬೋಧನಾ ಕ್ಷೇತ್ರದಲ್ಲಿ(ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ)ಅಥವಾ ಸ್ವಯಂ ಸೇವ ಸಂಸ್ಥೆಗಳೊಂದಿಗೆ ಕನಿಷ್ಠಾ 4 ರಿಂದ 5 ವರ್ಷಗಳ ಸೇವೆ ಸಲ್ಲಿಸಿದ ಅನುಬವ ಹೊಂದಿರತಕ್ಕದ್ದು. |

| | |
|---|---|
| | • ಗಣಕ ಯಂತ್ರದಲ್ಲಿ ಕನ್ನಡ ಮತ್ತು ಇಂಗ್ಲೀಷ್ ತಂತ್ರಾಂಶದಲ್ಲಿ ಕೆಲಸ ಮಾಡುವ ಹೊಂದಿರತಕ್ಕದ್ದು.<br>• ಜಿಲ್ಲೆಯಾದ್ಯಂತ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಕಾಲ ಕಾಲಕ್ಕೆ ಭೇಟಿ ನೀಡುವ ಆಸಕ್ತಿ ಮತ್ತು ಸದೃಢ ಮನಸ್ಥಿತಿ ಹೊಂದಿದವರಾಗಿರತಕ್ಕದ್ದು.<br>• ಕನ್ನಡ, ಇಂಗ್ಲಿಷ್ ಹಾಗೂ ಸ್ಥಳೀಯ ಭಾಷೆಗಳಲ್ಲಿ ಓದಲು ಬರೆಯಲು ಮತ್ತು ಮಾತನಾಡುವ ಪ್ರಬುದ್ಧತೆಯನ್ನು ಹೊಂದಿರತಕ್ಕದ್ದು.<br>• ವಿವಿಧ ಇಲಾಖಾ ಅಧಿಕಾರಿಗಳೊಂದಿಗೆ ಮತ್ತು ಸಮುದಾಯದೊಂದಿಗೆ ಕಾರ್ಯನಿರ್ವಹಿಸಲು ಉತ್ತಮ ಸಂವಹನ ಕೌಶಲ್ಯವನ್ನು ಹೊಂದಿರತಕ್ಕದ್ದು,<br>• ಸದರಿ ಹುದ್ದೆಗಳು ತಾತ್ಕಾಲಿಕವಾಗಿರುವುದರಿಂದ ಯಾವುದೇ ಮುನ್ಸೂಚನೆ ನೀಡದೇ ತೆಗೆದುಹಾಕುವ ಅಧಿಕಾರವು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಇವರಿಗೆ ನೀಡಲಾಗಿದೆ. |
| **ಜಿಲ್ಲಾ ಸಂಪನ್ಮೂಲ ವ್ಯಕ್ತಿಯು ನಿರ್ವಹಿಸಬೇಕಾದ ಜಬ್ದಾರಿಗಳು** | • ಜಿಲ್ಲಾ ಸಂಪನ್ಮೂಲ ಕೇಂದ್ರದ ಎಲ್ಲಾ ಯೋಜಿತ ಕಾರ್ಯಚಟುವಟಿಕೆಗಳನ್ನು ಸಮಯಾನುಸಾರ ಅನುಷ್ಠಾನಗೊಳಿಸುವುದು.<br>• ಜಿಲ್ಲಾ ಸಂಪನ್ಮೂಲ ಕೇಂದ್ರವನ್ನು ಚಟುವಟಿಕೆ ಆಧಾರಿತ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು ಸಹಕರಿಸುವುದು.<br>• ತಾಲೂಕ ಹಾಗೂ ವಲಯ ಮಟ್ಟದ ಸಂಪನ್ಮೂಲ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಸಹಕರಿಸುವುದು.<br>• ಮೇಲ್ವಿಚಾರಕಿಯರು(supervisor)ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ತರಬೇತಿಗಳನ್ನು ಕಾರ್ಯಯೋಜನೆ ಅನುಸಾರ ನೀಡುತ್ತಿರುವುದನ್ನು ಖಾತ್ರಿ ಪಡಿಸುವುದು ಮತ್ತು ಇದಕ್ಕಾಗಿ ಅವಶ್ಯಕ್ಕೆ ಅನುಗುಣವಾಗಿ ಕ್ಷೇತ್ರ ಭೇಟಿಮಾಡುವುದು.<br>• ತರಬೇತಿಯಲ್ಲಿ ತಿಳಿಸಿದಂತೆ ಅಂಗನವಾಡಿ ಕೇಂದ್ರಗಳಲ್ಲಿ ಶಾಲಾಪೂರ್ವ ಶಿಕ್ಷಣ ಚಟುವಟಿಕೆಗಳು ನಡೆಯುವುದನ್ನು ಕ್ಷೇತ್ರ ಭಟಿಯ ಮೂಲಕ ಖಾತ್ರಿ ಪಡಿಸಿಕೊಳ್ಳುವುದು.<br>• ಸಮುದಾಯಗಳಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸಮುದಾಯಾಧಾರಿತ ಸಭೆಗಳನ್ನು ಆಯೋಜಿಸುವುದು.<br>• ಕಾರ್ಯಕ್ರಮದ ಸುಗಮ ಅನುಷ್ಠಾನಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಮತ್ತು ತಾಲೂಕದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವುದು. |

**ವಯೋಮಿತಿ** : ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಗರಿಷ್ಠ: 50 ವರ್ಷ

**ವಿಶೇಷ ಸೂಚನೆಗಳು :**

1. ಸದರಿ ಮೇಲಿನ ಹುದ್ದೆಗಳು ಗೌರವ ಸೇವೆಯ ಆಧಾರದಲ್ಲಿ ಇರುತ್ತವೆ.
2. ಅಭ್ಯರ್ಥಿಗಳು ಹುದ್ದೆಗೆ ಅನುಗುಣವಾಗಿ ಅಂಗೀಕೃತ ಕಾಲೇಜು/ವಿಶ್ವ ವಿದ್ಯಾಲಯಗಳಿಂದ ಶಿಕ್ಷಣ ಪಡೆದಿರಬೇಕು.
3. ಕಂಪ್ಯೂಟರ್ ಜ್ಞಾನದ ಬಗ್ಗೆ ಖಾತ್ರಿ ಪಡಿಸಿಕೊಂಡು ಕೌಶಲ್ಯ ಪರೀಕ್ಷೆ ನಡೆಸಿ ಸಂದರ್ಶನ ಮೂಲಕ ಆಯ್ಕೆ ಮಾಡಲಾಗುವುದು.
4. ಅಭ್ಯರ್ಥಿಗಳ ಆಯ್ಕೆಯು ತಾತ್ಕಾಲಿಕವಾಗಿರುತ್ತದೆ.
5. ಸದರಿ ನೇಮಕಾತಿಯು 11 ತಿಂಗಳ ಅವಧಿಯಾಗಿದ್ದು, ಕೆಲಸ ನಿರ್ವಹಣೆಯ ಆಧಾರದ ಮೇರೆಗೆ ಹುದ್ದೆಯನ್ನು ಮುಂದಿನ ಅವಧಿಗೆ ಮುಂದುವರೆಸಲಾಗುತ್ತದೆ.
6. ಅಭ್ಯರ್ಥಿಗಳ ಆಯ್ಕೆ ಬಗ್ಗೆ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
7. ತಾತ್ಕಾಲಿಕ ಹುದ್ದೆಗಳು ಇರುವುದರಿಂದ ಯಾವುದೇ ಮೀಸಲಾತಿಗಳು ಅನ್ವಯಿಸುವುದಿಲ್ಲ.
8. ಸದರಿ ಮೇಲಿನ ಹುದ್ದೆಗಳ ಕರ್ತವ್ಯವು ಕ್ಷೇತ್ರಮಟ್ಟದಲ್ಲಿ ನಿರ್ವಹಿಸಬೇಕಾಗಿರುತ್ತದೆ.
9. ಆಯ್ಕೆಯಾದ ಅಭ್ಯರ್ಥಿಗಳ ದಾಖಲಾತಿಗಳು ನಕಲಿ/ಖೊಟ್ಟಿ ಎಂದು ಸಾಬೀತದಲ್ಲಿ ಆಯ್ಕೆಯನ್ನು ಕೈಬಿಟ್ಟು ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಸಲ್ಲಿಸಬೇಕಾದ ದಾಖಲೆಗಳು :

1. ನಿಗದಿತ ನಮೂನೆಯಲ್ಲಿ ಅರ್ಜಿ
2. ಎಸ್.ಎಸ್.ಎಲ್.ಸಿ ಅಂಕ ಪಟ್ಟಿ
3. ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯ ಅಂಕಪಟ್ಟಿಗಳು.
4. ಅನುಭವ ಪ್ರಮಾಣ ಪತ್ರಗಳು.
5. ಕಂಪ್ಯೂಟರ್ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ.

ಈ ಮೇಲಿನ ಹುದ್ದೆಗಳಿಗೆ ಕರ್ತವ್ಯ ನಿರ್ವಹಿಸಲು ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಯಾದಗಿರಿ ಜಿಲ್ಲಾ ಎನ್.ಐ.ಸಿ. ವೆಬ್ ಸೈಟ್: https://yadgir.nic.in ನಲ್ಲಿ ಪಡೆದು ದಿನಾಂಕ:09.10.2026ರ ವರೆಗೆ ಅಗತ್ಯ ದಾಖಲಾತಿಗಳೊಂದಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆ ಮೂಲಕ ಈ ಕಛೇರಿಗೆ ಕಛೇರಿ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಲು ಸೂಚಿಸಿದೆ. ದಿನಾಂಕ :09.10.2026ರ ನಂತರ ಯಾವುದೇ ಅಂಚೆ ಮೂಲಕ ಅಥವಾ ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

| | |
|---|---|
| ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ | ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯಾದಗಿರಿ ಕೋಣೆ ಸಂಖ್ಯೆ : ಸಿ–17, ಒಂದನೇ ಮಹಡಿ, ಜಿಲ್ಲಾ ಆಡಳಿತ ಭವನ ಸಂಕೀರ್ಣ, ಚಿತ್ತಾಪೂರ ರಸ್ತೆ, ಯಾದಗಿರಿ–585202 |
| ಅಂಚೆ ಮೂಲಕ ಅರ್ಜಿಗಳನ್ನು ಸಲ್ಲಿಬೇಕಾಗಿರುವ ವಿಳಾಸ | |

**ಉಪನಿರ್ದೇಶಕರು**
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**
**ಯಾದಗಿರಿ**

**ಅರ್ಜಿ ನಮೂನೆ**
**ಶಾಲಾ ಪೂರ್ವ ಶಿಕ್ಷಣ ಬಲವರ್ಧನೆ ಯೋಜನಯಡಿ ಜಿಲ್ಲಾ ಸಂಪನ್ಮೂಲಕ ವ್ಯಕ್ತಿಗಳ ಗೌರವಧನ ಹುದ್ದೆಗೆ ಅರ್ಜಿ**

**ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ**

| | | |
|---|---|---|
| 01 | ಅಭ್ಯರ್ಥಿಯ ಹೆಸರು | |
| 02 | ತಂದೆಯ ಹೆಸರು | |
| 03 | ತಾಯಿಯ ಹೆಸರು | |
| 04 | ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ | ಇ-ಮೇಲ್: <br> ಮೊಬೈಲ್ <br> ಜಿ ... ಪಿನ್ ಕೊಡ್ |
| 05 | ಜನ್ಮ ದಿನಾಂಕ (ದಿನಾಂಕ/ತಿಂಗಳು/ವರ್ಷ) | |
| 06 | ವೈವಾಹಿಕ ಸ್ಥಿತಿ (ವಿವಾಹಿತ/ಅವಿವಾಹಿತ/ವಿಧವೆ | |
| 07 | ರಾಷ್ಟ್ರೀಯತೆ | |
| 08 | ಜಾತಿ, ಉಪಜಾತಿ, ವರ್ಗ | |
| 09 | ಲಿಂಗ (ಗಂಡು/ಹೆಣ್ಣು/ಇತರೆ) | |
| 10 | ವಿದ್ಯಾರ್ಹತೆ | |

| ಕ್ರ. ಸಂ | ಸ್ನಾತಕೋತರ /ಪದವಿ | ವಿಶ್ವ ವಿಧ್ಯಾಲಯ | ಉತ್ತೀರ್ಣರಾದ ವರ್ಷ | ಗರಿಷ್ಠ ಅಂಕಗಳು | ಪಡೆದ ಅಂಕಗಳು | ಶೇಕಡಾ ಅಂಕಗಳು |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |

11 ಭಾಷಾ ಜ್ಞಾನ (ಅತ್ಯುತಮ/ಉತ್ತಮ/ ಸಾಧಾರಣ)

| ಬಾಷೆ | ಮಾತನಾಡುವಿಕೆ | ಓದಿ ಅರ್ಥೈಸಿಕೊಳ್ಳುವಿಕೆ | ಬರವಣಿಗೆ |
|---|---|---|---|
| ಕನ್ನಡ | | | |
| ಇಂಗ್ಲಿಷ | | | |
| ಹಿಂದಿ | | | |

12 ಕಂಪ್ಯೂಟರ್ ಜ್ಞಾನ (ಪ್ರಮಾಣಪತ್ರ ಲಗತ್ತಿಸುವುದು)

13 ಈ ಹಿಂದೆ ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ವಿವರ

| ಕ್ರ.ಸಂ | ಇಂದ ದಿನಾಂಕ | ವರೆಗೆ | ಅವಧಿ | ಪದನಾಮ | ನಿರ್ವಹಿಸಲಾದ ಕರ್ತವ್ಯ |
|---|---|---|---|---|---|
| | | | | | |
| | | | | | |
| | | | | | |
| | | | | | |

14 ಈ ಅರ್ಜಿಯೊಂದಿಗೆ ಲಗತ್ತಿಸಬೇಕಾದ ಸ್ವಯಂ ದೃಢೀಕೃತ ದಾಖಲಾತಿಗಳು

| | |
|---|---|
| 1. ಎಸ್.ಎಸ್.ಎಲ್.ಸಿ.ಅಂಕಪಟ್ಟಿ | |
| 2. ಸ್ನಾತಕೋತ್ತರ/ಪದವಿಯ ಎಲ್ಲಾಸೆ ಮಿಸ್ಟರ್/ವರ್ಷದ ಅಂಕಪಟ್ಟಿಗಳು. | |
| 3. ಕಂಪ್ಯೂಟರ್ ಕೋರ್ಸ್'ನ್ ಪ್ರಮಾಣ ಪತ್ರ. | |
| 4. ಅನುಭವದ ಪ್ರಮಾಣಪತ್ರ. | |
| 5. ವಿಶೇಷ ಅರ್ಹತೆಗೆ ಸಂಬಂಧ ಪಟ್ಟ ದಾಖಲೆಗಳು. | |
| 6. ತಹಸಿಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ. | |

ಈ ಅರ್ಜಿಯಲ್ಲಿ ನಾನು ನೀಡಿರುವ ಎಲ್ಲಾ ಮಾಹಿತಿಗಳು ನನ್ನ ಜ್ಞಾನ ಮತ್ತು ಗ್ರಹಿಕೆಯ ಮಟ್ಟಿಗೆ ಸತ್ಯ, ಸಂಪೂರ್ಣ ಮತ್ತು ಸರಿಯಾದವುಗಳೆಂದು ಆಯ್ಕೆಗೆ ಮೊದಲು ಅಥವಾ ನಂತರ ನಾನು ನೀಡಿರುವ ಮಾಹಿತಿಯು ತಪ್ಪೆಂದು ಅಥವಾ ನಾನು ಅನರ್ಹ ಎಂದು ಕಂಡು ಬಂದರೆ ನನ್ನ ಅರ್ಜಿಯನ್ನು ತಿರಸ್ಕರಿಸಲು ಹಾಗೂ ನನ್ನ ವಿರುದ್ಧ ಕ್ರಮ ಜರುಗಿಸಬಹುದಾಗಿರುತ್ತದೆಂದು ನಾನು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ: ಅಭ್ಯರ್ಥಿಯ ಸಹಿ

ಸ್ಥಳ: